ಹೇಳುವುದಕ್ಕೆ ಆಗುತ್ತದೆ. ಆದಕಾರಣ, ಸರ್ಕಾರದ ಮಟ್ಟದಲ್ಲಿ ಈ ಒಂದು report ಬರದ ಕಾರಣ, ಖಚಿತವಾಗಿ ಡೆಂಗ್ಯೂ ಜ್ವರದಿಂದ ಮೃತಪಟ್ಟ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. ಬಹುಶಃ ಇವತ್ತು ಬೇರೆ ಬೇರೆ 141 ಪ್ರಕರಣಗಳಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಮತ್ತು 56 ಪ್ರಕರಣಗಳು ಸರ್ಕಾರಿ ಆಸ್ಪತ್ರೆಗಳಲ್ಲಿ (ಒಟ್ಟು 197 ಪ್ರಕರಣಗಳು) ಚಿಕಿತ್ಸೆ ಪಡೆಯುತ್ತಿದ್ದಾರೆ. ಉಳಿದ ಎಲ್ಲಾ ಪ್ರಕರಣಗಳು ಗುಣಮುಖವಾಗಿವೆ.

ಬಹುಶಃ ಹಾವೇರಿ ಜಿಲ್ಲೆಯಲ್ಲಿದ್ದಂತಹ ಯಾವ ಪ್ರಶ್ನೆ ಎತ್ತಿದ್ದೀರಿ. ಇದರ ಬಗ್ಗೆ ಮತ್ತೇನಾದರೂ ವಿವರ, ನಿಮ್ಮ ಅನಿಸಿಕೆ ಇದ್ದಲ್ಲಿ ಇದಕ್ಕೆ ಸಂಬಂಧಪಟ್ಟ ನಮ್ಮ ಇಲಾಖಾಧಿಕಾರಿಗಳೊಡನೆ ಚರ್ಚೆ ಮಾಡಿ ಸಂಪೂರ್ಣವಾಗಿ ಸಮರೋಪಾದಿಯಲ್ಲಿ warfooting ನಲ್ಲಿ ಅದನ್ನು ಬಗೆ ಹರಿಸುವ ಪ್ರಯತ್ನ ಮಾಡುತ್ತೇವೆ.

3) **ವಿಷಯ** : ಬಾಗೇಪಲ್ಲಿ ಮತ್ತು ಗುಡಿಬಂಡೆ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡುವುದು.

ಶ್ರೀ ಎಸ್.ಎನ್.ಸುಬ್ಬಾರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೆ, ಗುಡಿಬಂಡೆ ಸರ್ಕಾರಿ ಆಸ್ಪತ್ರೆಯಲ್ಲಿ ಸುಮಾರು 96 ವೈದ್ಯ ಸಿಬ್ಬಂದಿ ಇರಬೇಕಾಗಿದ್ದು, ಈ ಪೈಕಿ 21 ವೈದ್ಯ ಸಿಬ್ಬಂದಿ ಮಾತ್ರ ಇದ್ದಾರೆ. ಅದೇ ರೀತಿ 101 ವೈದ್ಯರ ಪೈಕಿ ಇಬ್ಬರು ಮಾತ್ರ ಇದ್ದಾರೆ. ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆ ಪರಿಸ್ಥಿತಿಯೂ ಇದೇ ರೀತಿಯಲ್ಲಿದೆ. ಅಲ್ಲಿ 11 ವೈದ್ಯರಿದ್ದಾರೆ. ಆ ಆಸ್ಪತ್ರೆಯಲ್ಲಿ ಅವ್ಯವಸ್ಥೆ ಹೇಗಿದೆಯೆಂದರೆ, ಅದೊಂದು ರೀತಿ ಟ್ರಾವೆಲ್ ಏಜೆನ್ಸಿ ತರಹ ಇದೆ! ಆ ಆಸ್ಪತ್ರೆಗೆ ಯಾವುದೇ ರೋಗಿ ಹೋದರೂ ಬೆಂಗಳೂರಿನಲ್ಲಿರುವ ಆಸ್ಪತ್ರೆಗೆ ಹೋಗಬೇಕೆಂದು ಸುಲಭವಾಗಿ ಚೀಟಿ ಕೊಟ್ಟು ಕಳುಹಿಸುತ್ತಿದ್ದಾರೆ. ಆದುದರಿಂದ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಇದರತ್ತ ಗಮನಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ 5946 ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ ಸುಮಾರು 4024 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದು, 1697 ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಸಾಮಾನ್ಯ ವೈದ್ಯಾಧಿಕಾರಿಗಳು ಅಂದರೆ,

ಎಂ.ಬಿ.ಬಿ.ಎಸ್. ಮಾಡಿರುವವರು ಯಾರು 6 ವರ್ಷಕ್ಕಿಂತಲೂ ಕಡಿಮೆ ಸೇವೆ ಸಲ್ಲಿಸಿದ್ದಾರೋ, ಅವರು 135 ಇದ್ದು, 6 ವರ್ಷಕ್ಕಿಂತಲೂ ಮೇಲ್ಪಟ್ಟು ಸೇವೆ ಸಲ್ಲಿಸಿರುವ ಹಿರಿಯ ವೈದ್ಯರು 118 ಇದ್ದಾರೆ, ಉಪ ಮುಖ್ಯ ವೈದ್ಯಾಧಿಕಾರಿಗಳು 97. ಹೀಗೆ ಒಟ್ಟು 397 ಎಂ.ಬಿ.ಬಿ.ಎಸ್. ವೈದ್ಯಾಧಿಕಾರಿಗಳ ಕೊರತೆ ಇದ್ದು, ಅದೇ ರೀತಿ ತಜ್ಞ ವೈದ್ಯರ 1198 ಹುದ್ದೆಗಳು ಖಾಲಿ ಇವೆ.

ಅಧ್ಯಕ್ಷರು : ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದರ ಬಗ್ಗೆ ತಾವು ಉತ್ತರಿಸಬೇಕು.

ಶ್ರೀ ಯು.ಟಿ.ಖಾದರ್ : ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಒಂದು ಸಾರ್ವಜನಿಕ ಸರ್ಕಾರಿ ಆಸ್ಪತ್ರೆ, ಒಂದು ಸಮುದಾಯ ಆರೋಗ್ಯ ಕೇಂದ್ರ ಮತ್ತು.....

ಶ್ರೀ ಎಸ್.ಎನ್.ಸುಬ್ಬಾರೆಡ್ಡಿ : ನಾನು ಚಿಕ್ಕಬಳ್ಳಾಪುರದ ಬಾಗೇಪಲ್ಲಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲ. ವೈದ್ಯರುಗಳನ್ನು ಭರ್ತಿ ಮಾಡಲು ತಾವು ಏನು ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ಸೂಕ್ಷ್ಮವಾಗಿ ಹೇಳಬೇಕು.

ಶ್ರೀ ಯು.ಟಿ.ಖಾದರ್ : ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ ಇದ್ದು, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಎಂ.ಬ.ಬಿ.ಎಸ್. ಮಾಡಿರುವ ವೈದ್ಯರು ಯಾರಿದ್ದಾರೋ, ಅವರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಸಂಬಂಧಪಟ್ಟ ಜಿಲ್ಲೆಯ ಡಿ.ಹೆಚ್.ಓ. ಅವರುಗಳಿಗೆ ಸ್ಪಷ್ಟ ಆದೇಶನೀಡಲಾಗಿದೆ. ಇದರ ಜೊತೆಗೆ, ತಜ್ಞ ವೈದ್ಯರ ಕೊರತೆ ಬಹಳಷ್ಟಿರುವುದರಿಂದ ಮೊನ್ನೆ ಕೌನ್ಸಿಲಿಂಗ್ ನಡೆಸಿ ಈಗಾಗಲೇ ರಾಜ್ಯದಲ್ಲಿ ಎಲ್ಲೆಲ್ಲಿ ಕ್ರಿಟಿಕಲ್ ಕಂಡಿಷನ್ ಇದೆಯೋ, ಕಡಿಮೆ ಹುದ್ದೆಗಳಿರುವ ಕಡೆಗಳಲ್ಲಿ ವೈದ್ಯರು ಮತ್ತು ವೈದ್ಯ ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಿಕೊಳ್ಳಲು Compulsory Rural Service Act ಜಾರಿಗೆ ತರಬೇಕೆಂದು... ಸರ್ಕಾರ ಕ್ರಮ ತೆಗೆದುಕೊಂಡಿದೆ. ಕೇಂದ್ರ ಸರ್ಕಾರವು ಸದರಿ ಕಾಯ್ದೆಯನ್ನು ಅಂಗೀಕರಿಸಿದ್ದು, ಇದಕ್ಕೆ ಸನ್ಮಾನ್ಯ ರಾಷ್ಟ್ರಪತಿಯವರು ಅಂಕಿತ ಹಾಕಿದರೆ ಖಂಡಿತವಾಗಿಯೂ ಸರ್ಕಾರಿ ಆಸ್ಪತ್ರೆಗಳಲ್ಲಿರುವ ವೈದ್ಯರ ಸಮಸ್ಯೆಗಳು

ಬಗೆಹರಿದಂತಾಗುತ್ತದೆ. ಮಾನ್ಯ ಸದಸ್ಯರು ತಿಳಿಸಿರುವಂತೆ ಆಸ್ಪತ್ರೆಗಳಲ್ಲಿರುವ ಸಮಸ್ಯೆಗಳನ್ನು ಗಮನಿಸಿ ಮೊದಲ ಆದ್ಯತೆ ನೀಡಿ ಕ್ರಮ ಕೈಗೊಳ್ಳುತ್ತೇವೆಂದು ಈ ಮೂಲಕ ತಿಳಿಸಬಯಸುತ್ತೇನೆ.

4) ವಿಷಯ : ರಾಜೋಳಿ ಬಂಡಾ ಏತ ನೀರಾವರಿ ಯೋಜನೆ ಕಾಮಗಾರಿ ಪೂರ್ಣಗೊಳಿಸಲು ಹಣ ಬಿಡುಗಡೆ ಮಾಡುವುದು.

ಶ್ರೀ ಕೆ.ಶಿವಮೂರ್ತಿ (ಮಾಯಕೊಂಡ) : ಮಾನ್ಯ ಅಧ್ಯಕ್ಷರೆ, ಮಾಯಕೊಂಡ ಮತ್ತು ಬಿಳಿಚೋಡು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ರಾಜೋಳಿ ಏತ ನೀರಾವರಿ ಯೋಜನೆಯನ್ನು 2004ರಲ್ಲಿ ಕೈಗೆತ್ತಿಕೊಂಡಿದ್ದು, ಯೋಜನೆಯ ಕಾಮಗಾರಿ ಪೂರ್ಣಗೊಳಿಸಲು ಇದುವರೆಗೂ ಹಣ ಬಿಡುಗಡೆಯಾಗಿಲ್ಲ. ಯೋಜನೆ ಪೂರ್ಣಗೊಳಿಸಲು ವಿದ್ಯುಚ್ಛಕ್ತಿ ಪೂರೈಕೆಯಾಗಿಲ್ಲ ಮತ್ತು ಭೂ ಸ್ವಾಧೀನ ಪ್ರಕ್ರಿಯೆ ಕೂಡ ಪೂರ್ಣಗೊಂಡಿಲ್ಲ. ಸದರಿ ಯೋಜನೆಗೆ ಸುಮಾರು 125 ಕೋಟಿ ರೂ.ಗಳ ಆಯವ್ಯಯ ನಿಗದಿಯಾಗಿದ್ದು, ಪ್ರಸ್ತುತ 150 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಹೀಗಾಗಿ, ನಿನ್ನೆ ಆನಗೋಡುವಿನಲ್ಲಿ ರೈತರೆಲ್ಲರೂ ಒಂದೆಡೆ ಸೇರಿ ರಾಸ್ತಾ ರೋಕೋ ಚಳವಳಿ ಮಾಡುವುದರ ಮೂಲಕ ಕಾಮಗಾರಿ ಮುಕ್ತಾಯಗೊಳಿಸಬೇಕೆಂದು ಮತ್ತು ಅಗತ್ಯವಿರುವಷ್ಟು ಹಣ ಮಂಜೂರು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ. ಮಾಯಕೊಂಡ ಮತ್ತು ಬಿಳಿಜೋಡು ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಹೊನ್ನೂರು, ಕೊಗ್ಗನೂರು, ಆನಗೋಡು, ಕಾಲವರ್ತಿ, ಹೆಬ್ಬಾಳು, ಕಂದನಕೋವಿ, ಅಣಜಿ, ಉಪ್ಪಿನಹಳ್ಳಿ, ಬಿಳಿಜೋಡು, ಆಲೆಕಲ್ಲು, ನರಗನಹಳ್ಳಿ, ನೇರ್ಲಿಗೆ, ಕೊಡಗನೂರು, ಸುಲ್ತಾನಿಪುರ, ದೊಡ್ಡರಂಗವ್ವನಹಳ್ಳಿ ಮತ್ತು ಅಬ್ಬೂರು ಕೆರೆಗಳಿಗೆ ತುಂಗಭದ್ರಾ ನಾಲೆಯಿಂದ ನೀರು ಹರಿಸಿ ಕುಡಿಯುವ ನೀರಿಗೆ ಮತ್ತು ನೀರಾವರಿ ಉದ್ದೇಶಕ್ಕೆ ಒದಗಿಸಿಕೊಡುವ ಯೋಜನೆ ಇದಾಗಿದೆ. ಇದುವರೆಗೂ ಕಾಮಗಾರಿ ಕೈಗೊಂಡಿರದ ಕಾರಣ ಈ ಏತ ನೀರಾವರಿ ಯೋಜನೆ ಕಳೆದ ಹತ್ತು ವರ್ಷಗಳಿಂದ ಹಾಗೇ ಉಳಿದಿದೆ. ಈ ದಿಸೆಯಲ್ಲಿ ಕಾಮಗಾರಿ ಪೂರ್ಣಗೊಳ್ಳಲು ಸರ್ಕಾರ ಹಣ ಬಿಡುಗಡೆ ಮಾಡಿ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಮುಗಿಸಬೇಕು. ಇಲ್ಲಿ ಭೂ ಸ್ವಾಧೀನ ಪ್ರಕ್ರಿಯೆ, ಪೈಪ್‌ಲೈನ್ ಅಳವಡಿಸುವುದು ಮತ್ತು ವಿದ್ಯುಚ್ಛಕ್ತಿ ಪೂರೈಸುವುದು, ಈ ಮೂರು ಕೆಲಸಗಳಾದರೆ ಆ ಭಾಗದ ಜನರಿಗೆ ಯೋಜನೆಯು ವರಪ್ರಸಾದವಾಗುತ್ತದೆ.